**O.S.No.136/2008**
**DW-2**

**ದಿಃ 24.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಟಿ.ಆರ್., ವಕೀಲರಿಂದ**

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಾನು ಓದಿ ಸಹಿ ಮಾಡಿರುತ್ತೇನೆ. ವಾದಿ ಮತ್ತು ಆತನ ಮಕ್ಕಳ ಬಗ್ಗೆ ನನಗೆ ಗೊತ್ತು. ನನಗೂ ಮತ್ತು ವಾದಿ ಹಾಗೂ ಆತನ ಮಕ್ಕಳ ಮೇಲೆ ಯಾವುದೇ ಗಲಾಟೆ ಇಲ್ಲ. ನನಗೂ ಹಾಗೂ ವಾದಿ ಹಾಗೂ ಆತನ ಮಕ್ಕಳ ನಡುವೆ ವೈಷಮ್ಯವಿದ್ದು ಆ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು ವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾಸ್ವತ್ತು ಚಿಕ್ಕರಂಗಪ್ಪರವರಿಗೆ ಸೇರಿದ್ದಾಗಿರುತ್ತದೆ. ಚಿಕ್ಕರಂಗಪ್ಪರವರಿಗೆ ದಾವಾಸ್ವತ್ತು ಅವರ ತಾತನಿಂದ ಬಂದಿರುತ್ತದೆ. ಚಿಕ್ಕರಂಗಪ್ಪರವರ ತಾತನ ಹೆಸರು ಗೊತ್ತಿಲ್ಲ. ಚಿಕ್ಕರಂಗಪ್ಪರವರ ತಂದೆಯ ಹೆಸರು ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯ ಎಂದರೆ ಗೊತ್ತಿಲ್ಲ. ವಾದಿಯ ವಂಶವೃಕ್ಷದ ಬಗ್ಗೆ ನನಗೆ ತಿಳುವಳಿಕೆ ಇಲ್ಲ ಎಂದರೆ ಸರಿ. ದಾವಾಸ್ವತ್ತು ಚಿಕ್ಕರಂಗಪ್ಪರವರ ಪಿತ್ರಾರ್ಜಿತ ಆಸ್ತಿ, ಚಿಕ್ಕರಂಗಪ್ಪರವರ ವಂಶವೃಕ್ಷದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಿಕ್ಕರಂಗಪ್ಪರವರ ತಂದೆ ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯ ರವರು ತೀರಿಕೊಂಡ ಕಾರಣ ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯರವರ ಅಣ್ಣ ಚಿಕ್ಕದಾಸಪ್ಪರವರು ಚಿಕ್ಕರಂಗಪ್ಪರವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ. ಚಿಕ್ಕದಾಸಪ್ಪರವರಿಗೆ 7 ಜನ ಮಕ್ಕಳು ಎಂದರೆ ಗೊತ್ತಿಲ್ಲ. ಚಿಕ್ಕದಾಸಪ್ಪರವರು ತನ್ನ ಅಣ್ಣನ ಮಗನಾದ ಚಿಕ್ಕರಂಗಪ್ಪನನ್ನು ಸಾಕಿ ತನ್ನ ತಮ್ಮನ ಭಾಗವನ್ನು ಚಿಕ್ಕರಂಗಪ್ಪರವರಿಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಚಿಕ್ಕರಂಗಪ್ಪರವರಿಗೆ ಚಿಕ್ಕದಾಸಪ್ಪ ಯಾವುದೇ ಆಸ್ತಿಯನ್ನು ಕೊಟ್ಟಿಲ್ಲ ಕೇವಲ ಚಿಕ್ಕರಂಗಪ್ಪರವರ ಪಿತ್ರಾರ್ಜಿತ ಆಸ್ತಿಯಲ್ಲಿ ಅವರ ಭಾಗವನ್ನು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ-2 ರಲ್ಲಿ ಅನಂತಯ್ಯರವರ ಧರ್ಮಪತ್ನಿ ಈರಮ್ಮ ಎಂದು ಇದೆ ಎಂದರೆ ಸರಿ. ಈರಮ್ಮ ಅನಂತಯ್ಯರವರ ಧರ್ಮಪತ್ನಿಯಾಗಿದ್ದು ಚಿಕ್ಕರಂಗಪ್ಪರವರ ಧರ್ಮಪತ್ನಿಯಲ್ಲ ಎಂದರೆ ಸರಿಯಲ್ಲ. ಈರಮ್ಮಳಿಗೂ ಚಿಕ್ಕರಂಗಪ್ಪರವರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈರಮ್ಮಳ

ಆಧಾರ್ ಕಾರ್ಡ್ ಹಾಗೂ ಚುನಾವಣಾ ಗುರುತಿನ ಚೀಟಿಯಲ್ಲಿ ಆಕೆಯ ಗಂಡನ ಹೆಸರು ಅನಂತಯ್ಯ ಎಂದು ಇದೆ ಎಂದರೆ ಗೊತ್ತಿಲ್ಲ.

ವಾದಿಯ ತಾಯಿಯ ಬಗ್ಗೆ ಗೊತ್ತಿಲ್ಲ. ಬೂಚನಹಳ್ಳಿಯ ಸ್ವತ್ತು ವಾದಿಯ ತಾಯಿಯ ತವರು ಮನೆ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ವಿಚಾರ ಗೊತ್ತಿಲ್ಲದೇ ಇದ್ದರೂ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸದರಿ ವಿಚಾರವನ್ನು ತಿಳಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 10.05.2006 ರ ಕ್ರಯಪತ್ರದಲ್ಲಿ ವಾದಿಯು ಸಹಿ ಮಾಡಿಲ್ಲ ಎಂದರೆ ಸರಿ. ದಾವಾಸ್ವತ್ತು ವಾದಿಯ ಪಿತ್ರಾರ್ಜಿತ ಆಸ್ತಿಯಾಗಿದ್ದು ಅದನ್ನು ವಾದಿಯು ಮಾರಾಟ ಮಾಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ವಾದಿಯ ಕಾನೂನು ಬದ್ಧ ಹಕ್ಕನ್ನು ಕಿತ್ತುಕೊಳ್ಳಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಯಾವುದೇ ಕ್ರಯದ ಮೊಬಲಗು ಈರಮ್ಮ ಚಿಕ್ಕದಾಸಪ್ಪರವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎಷ್ಟು ಕ್ರಯದ ಮೊಬಲಗನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನದಲ್ಲಿ ಈಗಲೂ ವಾದಿಯೇ ಇರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಮುದ್ರಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ.**